Phone : 2287327 / 2287659 / 2284359 / 2287404 / 2287283 / 2287248
Fax : 0824 - 2287452 / 2287367 / 2287424
E-mail : controller@mangaloreuniversity.ac.in

# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

ಕುಲಸಚಿವರ ಕಛೇರಿ (ಪರೀಕ್ಷಾಂಗ)
ಮಂಗಳಗಂಗೋತ್ರಿ – ೫೭೪ ೧೯೯.
ಕರ್ನಾಟಕ ರಾಜ್ಯ, ಭಾರತ.

Office of the
Registrar (Evaluation)
Mangalagangothri - 574 199.
Karnataka State, India

ಸಂಖ್ಯೆ: ಮಂ.ವಿ/ಪ.ವಿ/ಮ.ಮೌ/ಸಿ.ಆರ್-3/2022-23/ಇ-30 ದಿನಾಂಕ:14.11.2025

## ಸುತ್ತೋಲೆ

ವಿಷಯ: ಜೂನ್/ ಜುಲೈ 2025 ರಲ್ಲಿ ಜರುಗಿದ **II,IV,VI** ಸೆಮಿಸ್ಟರ್‌ನ ವಿವಿಧ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿ ಮರುಮೌಲ್ಯಮಾಪನದ ಶೇ.50 ರಷ್ಟು ಮೊತ್ತವನ್ನು ಅರ್ಹರಾದ ವಿದ್ಯಾರ್ಥಿಗಳಿಗೆ ಹಿಂದಿರುಗಿಸುವ ಬಗ್ಗೆ

ಉಲ್ಲೇಖ: ಕುಲಸಚಿವರ ಕಚೇರಿ ಅಧಿಸೂಚನೆ ಸಂ: MUN/ACC/Regu/92-93/A2 ದಿ:08.11.1995

------------

ವಿಶ್ವವಿದ್ಯಾನಿಲಯದ ಮರುಮೌಲ್ಯಮಾಪನದ ನಿಯಮಾವಳಿ ಪ್ರಕಾರ ಮೇಲಿನ ವಿಷಯಕ್ಕೆ ಸಂಬಂಧಿಸಿ ವಿವಿಧ ವಿಷಯಗಳಲ್ಲಿ ಮರುಮೌಲ್ಯಮಾಪನವನ್ನು ಕೋರಿ ಅರ್ಜಿಸಲ್ಲಿಸಿದ ವಿದ್ಯಾರ್ಥಿಗಳು ಮರುಮೌಲ್ಯಮಾಪನದಲ್ಲಿ ಶೇ.10 ರಷ್ಟು ಹೆಚ್ಚು(ಕೃಪಾಂಕ ಹೊರತುಪಡಿಸಿ) ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಮರುಮೌಲ್ಯಮಾಪನದ ಶುಲ್ಕ(Fees) ದ ಶೇ. 50 ರಷ್ಟನ್ನು ಹಿಂದಿರುಗಿ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ.

ಸದರಿ ಮೊತ್ತವನ್ನು ಪಡೆದುಕೊಳ್ಳಲು ಅರ್ಹರಾದ ವಿದ್ಯಾರ್ಥಿಗಳು ತಮ್ಮ ಅರ್ಜಿಗಳಲ್ಲಿ ಈ ಕೆಳಗೆ ಕಾಣಿಸಿದ ವಿವರಗಳ ಬಗ್ಗೆ ಸ್ಪಷ್ಟವಾದ ಮಾಹಿತಿಗಳನ್ನು ಒದಗಿಸುವಂತೆ ಕೋರಲಾಗಿದೆ.

1. ಪದವಿ/ ಕಾರ್ಯಕ್ರಮದ ವಿವರ
2. ಸೆಮಿಸ್ಟರ್ ವಿವರ
3. ಯಾವ ವಿಷಯಕ್ಕೆ ಮರುಮೌಲ್ಯಮಾಪನದ ಮೊತ್ತವನ್ನು ಹಿಂದಿರುಗಿಸುವುದು.
4. ಮರುಮೌಲ್ಯಮಾಪನದ ಮೊದಲು ಮತ್ತು ನಂತರ ಪಡೆದ ಅಂಕಪಟ್ಟಿಯ ಜೆರಾಕ್ಸ್ ಪ್ರತಿ (ಪ್ರಾಂಶುಪಾಲರು ಮೇಲುರುಜು ಮಾಡುವುದು).
5. **ವಿಶ್ವವಿದ್ಯಾನಿಲಯಕ್ಕೆ ಹಣ ಪಾವತಿಸಿದ ಬಗ್ಗೆ** Online Payment **ವಿವರ** Transaction Reference Number and Date (Revaluation fee payment receipt **ಪ್ರತಿ ಕಡ್ಡಾಯ**).
6. ಹಿಂದಿರುಗಿಸಬೇಕಾದ ಮೊತ್ತ (ಅರ್ಜಿ ಶುಲ್ಕವನ್ನು ಹೊರತುಪಡಿಸಿ ಕೇವಲ ಅರ್ಹತೆ ಪಡೆದ ವಿಷಯಕ್ಕೆ ಪಾವತಿಸಿದ ಮರುಮೌಲ್ಯಮಾಪನ ಮೊತ್ತದ ಅರ್ಧದಷ್ಟು ಮಾತ್ರ)
7. ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು (ಮಾದರಿ ಅರ್ಜಿಯನ್ನು ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ)
8. ಮರುಮೌಲ್ಯಮಾಪನದ ಮೊತ್ತವನ್ನು ಮರುಪಾವತಿಸಬೇಕಾದ ವಿದ್ಯಾರ್ಥಿ/ನಿಯ ಬ್ಯಾಂಕ್ ಖಾತೆ ವಿವರ ಮತ್ತು ಬ್ಯಾಂಕ್ ಖಾತೆ ಪುಸ್ತಕದ ಜೆರಾಕ್ಸ್ ಪ್ರತಿ**( ಜೆರಾಕ್ಸ್ ಪ್ರತಿಯಲ್ಲಿ ಖಾತೆ ಸಂಖ್ಯೆ ಮತ್ತು IFSC ಸ್ಪಷ್ಟವಾಗಿ ಕಾಣಿಸುವಂತಿರಬೇಕು.**

ತಮ್ಮ ಅರ್ಜಿಗಳನ್ನು ಪ್ರಾಂಶುಪಾಲರ ಮುಖಾಂತರ ದಿನಾಂಕ **15.12.2025ರೊಳಗೆ** ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವುದು. ಅಪೂರ್ಣವಾದ ಮತ್ತು ತಡವಾಗಿ ಸ್ವೀಕೃತವಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಈ ವಿಷಯವನ್ನು ಸಂಬಂಧಪಟ್ಟ ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ಹಾಗೂ ವಿದ್ಯಾರ್ಥಿಗಳು ಅರ್ಜಿಗಳಲ್ಲಿ ಈ ಮೇಲೆ ಹೇಳಿದ ವಿವರಗಳನ್ನು ಸಂಪೂರ್ಣವಾಗಿ ಬರೆದಿದ್ದಾರೆಯೇ ಎಂದು ಕೂಲಂಕುಷವಾಗಿ ಪರಿಶೀಲಿಸಿ ಅರ್ಜಿಗಳನ್ನು ಒಂದೊಂದಾಗಿ ಕಳುಹಿಸದೆ ಒಟ್ಟಾಗಿ ಕಳುಹಿಸಿಕೊಡಲು ಈ ಮೂಲಕ ತಿಳಿಸಲಾಗಿದೆ.

14/11/24

ಕುಲಸಚಿವರು(ಪರೀಕ್ಷಾಂಗ)

ರಿಗೆ,

ವಿಶ್ವವಿದ್ಯಾನಿಲಯದ ಅಧೀನಕೊಳಪಟ್ಟ
ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಲಗತ್ತು:

1) ಮರುಮೌಲ್ಯಮಾಪನ ಶುಲ್ಕ ಮರುಪಾವತಿ ನಮೂನೆ.

# ಮಂಗಳೂರು ವಿಶ್ವವಿದ್ಯಾನಿಲಯ

## ಮರು ಮೌಲ್ಯಮಾಪನ ಶುಲ್ಕ ಮರುಪಾವತಿ ಬಿಲ್ಲು

ವಿದ್ಯಾರ್ಥಿಯ ಹೆಸರು : ______________________________

ನೋಂದಣಿ ಸಂಖ್ಯೆ : ______________________________

ವಿಳಾಸ : ______________________________

______________________________

______________________________

ಕಾಲೇಜು : ______________________________

ಮರುಪಾವತಿಗೆ ಅರ್ಜಿ ಹಾಕಿದ ವಿಷಯದ ವಿವರ :

| ಪರೀಕ್ಷೆ ನಡೆದ ತಿಂಗಳು ಮತ್ತು ವರ್ಷ | ಸೆಮಿಸ್ಟರ್ ಮತ್ತು ಪದವಿ | ವಿಷಯ | ಥಿಯರಿ ಪತ್ರಿಕೆಗೆ ಗರಿಷ್ಠ ಅಂಕ | ಐಎ ಅಂಕ | ಥಿಯರಿ ಪತ್ರಿಕೆಯಲ್ಲಿ ಮೊದಲು ಪಡೆದ ಅಂಕ | ಥಿಯರಿ ಪತ್ರಿಕೆಯಲ್ಲಿ ಮರುಮೌಲ್ಯ ಮಾಪನದಲ್ಲಿ ಪಡೆದ ಅಂಕ | ಶೇಕಡಾ ವ್ಯತ್ಯಾಸ | ಮರುಪಾವತಿಸ ಬೇಕಾದ ಮೊತ್ತ ರೂ. |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |

ವಿಶ್ವವಿದ್ಯಾನಿಲಯಕ್ಕೆ ಪಾವತಿಸಿದ ಚಲನ್ ಡಿ.ಡಿ. ಸಂಖ್ಯೆ : ______________ ದಿನಾಂಕ : ______________

ಮೊತ್ತ ರೂ. : ______________ ರೂಪಾಯಿ ______________________________

### ದೃಢೀಕರಣ

ಈ ಬಿಲ್ಲಿನಲ್ಲಿ ಮರುಪಾವತಿಗೆ ಕಾಣಿಸಿರುವ ಮೊತ್ತವು ಸರಿಯಾಗಿರುತ್ತದೆ. ಈ ಮೊತ್ತವನ್ನು ಈ ಹಿಂದೆ ಯಾವುದೇ ಬಿಲ್ಲಿನಲ್ಲಿ ಮರುಪಾವತಿ ಪಡೆದಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ______________

ಸ್ಥಳ : ______________

ವಿದ್ಯಾರ್ಥಿಯ ರುಜು

ಸಂಖ್ಯೆ : ______________________________ ದಿನಾಂಕ : ______________

ಕುಲಸಚಿವರು (ಪರೀಕ್ಷಾಂಗ) ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಇವರಿಗೆ ಮರುಪಾವತಿ ಬಿಲ್ಲನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ

ದಿನಾಂಕ : ______________

ಸ್ಥಳ : ______________

ಪ್ರಾಂಶುಪಾಲರು
(ಕಾಲೇಜು ಮೊಹರು)

### ಕಛೇರಿ ಉಪಯೋಗಕ್ಕೆ

ಸಂಖ್ಯೆ : ಮಂವಿ/ಪವಿ/ಪ/ಮಮೌ ಮರುಪಾವತಿ /20 – 20

ದಿನಾಂಕ :

ರೂ ______________ (ರೂಪಾಯಿ ______________________________) ಮಾತ್ರಕ್ಕೆ ಮೇಲುರುಜು ಮಾಡಲಾಗಿದೆ.

ಕುಲಸಚಿವರು ಪರೀಕ್ಷಾಂಗ